# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2 (82)

ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ ಅರಳಿ
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 13.02.2023

ಉತ್ತರಿಸಬೇಕಾದ ಸಚಿವರು : ಪ್ರವಾಸೋದ್ಯಮ ಹಾಗೂ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ ನಗರದ ಹಳ್ಳದಕೇರಿ (ಕೆ)ಯಲ್ಲಿ ಸ್ಥಾಪಿತವಿರುವ ಕೆರೆಗೆ ವಸತಿ ಶಾಲೆಯ ಕೊಳಚೆ ತ್ಯಾಜ್ಯದ ನೀರು ಬಿಟ್ಟು ಪರಿಸರವನ್ನು ಹಾಳು ಮಾಡುತ್ತಿರುವುದು ಮತ್ತು ಕೆರೆಯ ಸ್ಥಿತಿಯು ಅಧೋಗತಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು<br>ಕೆರೆಯ ನೀರಿನ ಮಾದರಿಯನ್ನು ದಿನಾಂಕ:07.02.2023 ರಂದು ಸಂಗ್ರಹಿಸಿ ಮಾಲಿನ್ಯದ ಪ್ರಮಾಣ ತಿಳಿಯಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಅದರ ವರದಿಯನ್ನು ನಿರೀಕ್ಷಿಸಲಾಗಿದೆ |
| ಆ) | ಬಂದಿದ್ದಲ್ಲಿ; ಪರಿಸರ ಹಾಳುಮಾಡುತ್ತಿರುವ ಈ ವಸತಿ ಶಾಲೆಯ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ. | ದಿನಾಂಕ 07.02.2023 ರಂದು ಪೌರಾಯುಕ್ತರು, ನಗರಸಭೆ ಬೀದರ್ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳ ವತಿಯಿಂದ ಜಂಟಿಯಾಗಿ ಸ್ಥಳ ಪರಿವೀಕ್ಷಣೆ ಕೈಗೊಳ್ಳಲಾಗಿರುತ್ತದೆ.<br>• ವಸತಿ ಶಾಲೆಯವರು ತ್ಯಾಜ್ಯ ಸಂಸ್ಕರಣ ಘಟಕವನ್ನು ಅಳವಡಿಸಿರುತ್ತಾರೆ.<br>• ಶಾಹಿನ್ ಕಾಲೋನಿಯ ತ್ಯಾಜ್ಯ ನೀರು ಪಕ್ಕದ ಕೆರೆಗೆ ಸೇರುತ್ತಿರುವುದು ಗಮನಿಸಲಾಯಿತು |
| ಇ) | ಕೆರೆಯ ಸುತ್ತಲೂ ವಸತಿ ಪ್ರದೇಶವಿದ್ದು, ಪರಿಸರ ಹಾಳಾಗುತ್ತಿರುವುದರಿಂದ ಸಾರ್ವಜನಿಕರ ಕುಡಿಯುವ ನೀರು ಮಾಲಿನ್ಯ ವಾಗುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಳ್ಳುವ ಕ್ರಮಗಳಾವುವು; | ಕೆರೆಗೆ ವಸತಿ ಶಾಲೆಯ ಸಂಸ್ಕರಣ ಘಟಕದಿಂದ ಹೆಚ್ಚುವರಿ ನೀರು ಮತ್ತು ಶಾಹಿನ್ ಕಾಲೋನಿಯ ತ್ಯಾಜ್ಯ ನೀರು ಕೆರೆಗೆ ಸೇರುವುದನ್ನು ಮಂಡಳಿಯ ಅಧಿಕಾರಿಯವರು ಗಮನಿಸಿರುತ್ತಾರೆ ಮತ್ತು ಶಾಹಿನ್ ಕಾಲೋನಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ನಗರಸಸಭೆ ಬೀದರ ರವರಿಗೆ ತಿಳಿಸಲಾಗಿದೆ. |
| (ಈ) | ಮಾಲಿನ್ಯ ಮಾಡುತ್ತಿರುವ ಈ ವಸತಿ ಶಾಲೆಯ ವಿರುದ್ಧ ಸರ್ಕಾರ ಕ್ರಮ ಜರುಗಿಸಲಾಗುವುದೇ; ಇಲ್ಲದಿದ್ದಲ್ಲಿ ಯಾವ ರೀತಿಯ ಕ್ರಮ ವಹಿಸಲಾಗುವುದು? | ವಸತಿ ಶಾಲೆಗೆ ದಿನಾಂಕ:07.02.2023 ರಂದು ಮಂಡಳಿಯಿಂದ ನೋಟಿಸನ್ನು ಜಾರಿಮಾಡಲಾಗಿದೆ ಹಾಗು ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ತಮ್ಮದೇ ಆವರಣದಲ್ಲಿ ತೋಟಗಾರಿಕೆಗೆ ಬಳಸಲು ಸೂಚಿಸಲಾಗಿದೆ. |

ಸಂಖ್ಯೆ: ಅಪಜೀ 24 ಇಎನ್‌ಜಿ 2023

(ಆನಂದ್ ಸಿಂಗ್)
ಪ್ರವಾಸೋದ್ಯಮ ಹಾಗೂ ಜೀವಿಪರಿಸ್ಥಿತಿ
ಮತ್ತು ಪರಿಸರ ಸಚಿವರು.